ಸಿ. ಸಿ. ನಂ.- **1047/2023**

ಪಿ.ಡಬ್ಲ್ಯೂ. **1**

ಸಾಕ್ಷಿಯು ದಿನಾಂಕ- **03-09-2025** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲು- ಆರೋಪಿ ಪರ ಶ್ರೀ ಕೆ ವಿ ಬಿ ವಕೀಲರಿಂದ -

ನಿಪಿ **1** ಚೆಕ್ ಮತ್ತು ನಿಪಿ **4** ಸ್ವಿಕೃತಿ ಪ್ರತಿಯಲ್ಲಿರುವ ಸಹಿಗಳು ಬೇರೆ ಬೇರೆ ಎಂದರೆ ಸರಿ. ನಾನು ಆಡಿಟರ್. ನಾನು ಸತ್ಯಂ ಆ್ಯಂಡ್ ದತ್ತಾ ಹೆಸರಿನಲ್ಲಿ ಸಿ.ಎ., ಫರ್ಮ್ ನಡೆಸುತ್ತಿದ್ದೇನೆ. ನಿಪಿ **18** ರಲ್ಲಿ ಕಾಣುವ ಆಡಿಟ್ ರಿಪೋರ್ಟ್ ನ್ನು ಡಿ.ಮೋಹನ ಆ್ಯಂಡ್ ಆಸೋಸಿಯೆಟ್ಸ್ ಸಿ.ಎ., ಫರ್ಮ್ ನಿಂದ ಪಡೆದುಕೊಂಡಿರುತ್ತೇನೆ. ನಿಪಿ **18** ರಲ್ಲಿ ಕಾಣುವ ಆಡಿಟ್ ರಿಪೋರ್ಟ್ ನ್ನು ಈ ಮೇಲೆ ಹೇಳಿದ ಡಿ.ಮೋಹನ ಆ್ಯಂಡ್ ಆಸೋಸಿಯೆಟ್ಸ್ ಸಿ.ಎ., ಫರ್ಮ್ ನವರು ಮಾಡಿದ್ದರಿಂದ ಅವರ ಸಹಿ ಮಾತ್ರ ಈ ದಾಖಲೆಯಲ್ಲಿ ಇರಬೇಕಿತ್ತು ಆದರೆ ನನ್ನ ಸಹಿ ಸಹ ಈ ದಾಖಲೆಯಲ್ಲಿ ಇದೇ ಎಂದರೆ ಸಾಕ್ಷಿ ಅವರು ಆಡಿಟ್ ಮಾಡಿರುವುದಾರಿ ಸಹಿ ಮಾಡಿರುತ್ತಾರೆ ನಾನು ಅವರ ಕ್ಲಾಯಿಂಟ್ ಆಗಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ಆಡಿಟ್ ಮಾಡಿದವರ ಸಹಿ ಮಾತ್ರ ಇರಬೇಕು ಎಂಬುದು ತಪ್ಪಾಗಿರುತ್ತದೆ. ನಿಪಿ **14** ನನ್ನ ಖಾತಾ ವಿವರ ಆಗಿರುತ್ತದೆ. ನಾನು ಒಟ್ಟು ನನ್ನ **5-6** ಬ್ಯಾಂಕ್ ಖಾತೆಗಳ ವಿವರಗಳನ್ನು ಮಾನ್ಯ ನ್ಯಾಯಾಲಯದ ಮುಂದೆ ಸಲ್ಲಿಸಿರುತ್ತೇನೆ. ನಾನು ಬ್ಯಾಂಕ್ ಆಫ್ ಬರೋಡಾ, ಐಸಿಐಸಿಐ ಬ್ಯಾಂಕ್, ಹೆಚ್.ಡಿ.ಎಫ್.ಸಿ ಬ್ಯಾಂಕ್, ಕೋಟಕ್ ಮಹೇಂದ್ರಾ ಬ್ಯಾಂಕ್ ಗಳಲ್ಲಿರುವ ನನ್ನ ಖಾತಾ ವಿವರಗಳನ್ನು ಹಾಜರುಪಡಿಸಿರುತ್ತೇನೆ. ನಾನು ನ್ಯಾಯಾಲಯದ ಮುಂದೆ ಆದಾಯ ತೆರಿಗೆ ಪಾವತಿಯ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸರ್ಕಾರಕ್ಕೆ ನಾನು ಆದಾಯ ತೆರಿಗೆ ಪಾವತಿ ಮಾಡಿರುವ ಕುರಿತು ಸರ್ಕಾರದ ಪೋರ್ಟಲ್ ನಿಂದ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಬ್ಯಾಂಕ್ ನ ಖಾತಾ ವಿವರವನ್ನು ನಾನು ನನ್ನ ಫೋನ್‌ನಲ್ಲಿ ಡೌನ್‌ಲೋಡ್ ಮಾಡಿದ ನಂತರ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನಿಪಿ **1** ಚೆಕ್‌ನಲ್ಲಿರುವ ಬರವಣಿಗೆ ಆರೋಪಿಯದ್ದು ಅಲ್ಲ ಎಂದರೆ ಸಾಕ್ಷಿ ಅದರಲ್ಲಿರುವ ಬರವಣಿಗೆ ನನ್ನದು, ಆದರೆ ಸಹಿ ಮಾತ್ರ ಆರೋಪಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಅನಕೂಲಕ್ಕೆ ತಕ್ಕಂತೆ ಚೆಕ್‌ನಲ್ಲಿ ಮೊತ್ತವನ್ನು ಬರೆದು ಅದನ್ನು ಬ್ಯಾಂಕ್ ನಲ್ಲಿ ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಿಃ **16.08.2023** ಅಥವಾ ದಿಃ **18.08.2023** ರಂದು ನಾನು ನಿಪಿ **1** ಚೆಕ್‌ನ್ನು ನಗಧಿಕರಣಕ್ಕೆಂದು ಬ್ಯಾಂಕ್‌ನಲ್ಲಿ ಹೋಗಿರುತ್ತೇನೆ. ನಿಪಿ **1** ಚೆಕ್‌ನ್ನು ಬ್ಯಾಂಕ್ ನಲ್ಲಿ ಹೂಡಲಾಗಿದೆ ಎಂದು ತೋರಿಸಲು ಅದರ ಹಿಂದೆ ಬ್ಯಾಂಕ್ ನ ಸೀಲ್ ಇಲ್ಲ ಎಂದರೆ ಸಾಕ್ಷಿ ಅದರ ಅವಶ್ಯಕತೆ ಇಲ್ಲ,

ಬ್ಯಾಂಕ್‌ನವರು ಮೇಮೊ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಚೆಕ್‌ನ್ನು ಯಾವ ನಿಗಧಿತ ದಿನಾಂಕದಂದು ಬ್ಯಾಂಕ್‌ನಲ್ಲಿ ಹೂಡಲಾಗಿದೆ ಎಂದು ತೋರಿಸಲು ಅದರ ಬಗ್ಗೆ ರಶೀದಿಯನ್ನು ಹಾಜರುಪಡಿಸಿಲ್ಲ.

ನಾನು ಈ ಪ್ರಕರಣದಲ್ಲಿ ಎರಡು ಬಾರಿ ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಈ ಪ್ರಕಣಕ್ಕೆ ಸಂಬಂದಪಟ್ಟಂತೆ ಆರೋಪಿಗೆ ನಾನು ಒಂದು ಬಾರಿ ನೋಟಿಸ್ ಕೊಟ್ಟಿರುತ್ತೇನೆ. ದಿಃ 25.01.2012 ರಂದು ನಾನು ಆರೋಪಿಗೆ ರೂ. 1 ಲಕ್ಷ ಮೊತ್ತವನ್ನು ಕೊಟ್ಟಿರುತ್ತೇನೆ ಎಂದು ದೂರಿನಲ್ಲಿ ಬರೆದಿರುತ್ತೇನೆ ಎಂದರೆ ಸರಿ. ನಾನು ಒಟ್ಟು 6 ಜನಕ್ಕೆ ಸಾಲ ಕೊಟ್ಟಿರುತ್ತೇನೆ. ಅದರಲ್ಲಿ ಇಬ್ಬರು ಹೊರಗಿನವರಾಗಿರುತ್ತಾರೆ, ಉಳಿದ 4 ಜನ ನನ್ನ ಸಿಬ್ಬಂದಿಯಾಗಿರುತ್ತಾರೆ. ನನ್ನ ಸಿಬ್ಬಂದಿಗೆ ರೂ. 2 ಲಕ್ಷ, ರೂ. 3 ಲಕ್ಷ, ರೂ. 1 ಲಕ್ಷದಂತೆ ಸಾಲ ಕೊಟ್ಟಿರುತ್ತೇನೆ. ಉಳಿದ ಇಬ್ಬರಲ್ಲಿ ಆರೋಪಿಗೆ ರೂ. 49 ಲಕ್ಷ, ಇನ್ನೊಬ್ಬ ವ್ಯಕ್ತಿಯಾದ ಅಲ್ಲಾಭಕ್ಷಿ ರವರಿಗೆ ರೂ. 46 ಲಕ್ಷವನ್ನು ಸಾಲವನ್ನಾಗಿ ಕೊಟ್ಟಿರುತ್ತೇನೆ. ನನ್ನ ಆಡಿಟ್ ರಿಪೊರ್ಟ್ ನಲ್ಲಿ ಆರೋಪಿಗೆ ರೂ. 49 ಲಕ್ಷವನ್ನು ಸಾಲವನ್ನಾಗಿ ಕೊಟ್ಟಿರುತ್ತೇನೆ ಎಂದು ತೋರಿಸಿರುತ್ತೇನೆ. ದಿಃ 31.03.2023 ರಂದು ಸತ್ಯಂ ಆ್ಯಂಡ್ ದತ್ತಾ ಸಿ.ಎ., ಫರ್ಮ್ ನ ಶೆಡ್ಯೂಲ್ ಟು ಅಸ್ಸೆಸ್ ನ ದಾಖಲೆಯಲ್ಲಿ ನಿಮ್ಮ ಸಹಿ ಮಾತ್ರ ಇದೆ, ಆಡಿಟರ್ ಸಹಿ ಇಲ್ಲ ಎಂದರೆ ಸಾಕ್ಷಿ ಅದರಲ್ಲಿ ಅವರ ಸಹಿ ಅವಶ್ಯಕತೆ ಇರುವುದಿಲ್ಲ, ಆಡಿಟರ್ ಆದಾಯ ಮತ್ತು ಖರ್ಚು ವರದಿ ಹಾಗೂ ಬ್ಯಾಲೇನ್ಸ್ ಶೀಟ್ ಮೇಲೆ ಮಾತ್ರ ಸಹಿ ಮಾಡುತ್ತಾರೆ ಎಂದು ನುಡಿಯುತ್ತಾರೆ. ನಾನು ಆರೋಪಿಯ ಒಂದು ವಿಳಾಸಕ್ಕೆ ಕಳುಹಿಸಿದ ನೋಟಿಸ್ ಜಾರಿಯಾಗಿದೆ, ಉಳಿದ ಎರಡು ವಿಳಾಸಕ್ಕೆ ಜಾರಿಯಾಗಿರುವುದಿಲ್ಲ. ನಾನು ಮೂರು ಆರೋಪಿಯ ವಿಳಾಸಗಳಿಗೆ ಕಳುಹಿಸಿದ ನೋಟಿಸ್ ಅವರಿಗೆ ಮುಟ್ಟಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಇನ್ನೂ ಹೆಚ್ಚಿನ ಪಾಟೀಸವಾಲಿಗಾಗಿ ಸಮಯಾವಕಾಶವನ್ನು ಕೇಳಿದ್ದು ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಲಯ
ಮತ್ತು ಪ್ರ. ದ. ನ್ಯಾ. ದಂ.ಗಳು, ಹೊಸಪೇಟೆ.